ದಿನಾಂಕಃ 21.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ –

ಪುಟ್ಟಗೌರಮ್ಮನವರ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಆದಾಯವನ್ನು ಪರಿಗಣಿಸಲು ನಾನು ಕೃಷಿ ಅಧಿಕಾರಿಗೆ ಪತ್ರಿಸಿ ಅವರ ದಾಖಾಲತಿಗಳನ್ನು ಪಡೆದುಕೊಂಡು ಪರಿಶೀಲಿಸಿರುತ್ತೇನೆ. ಪುಟ್ಟಗೌರಮ್ಮನವರಿಗೆ ಅವರ ತಂದೆ ಹುಚ್ಚೇಗೌಡರಿಂದ ಬಂದಿದ್ದಂತಹ ಸ್ವತ್ತುಗಳ ಬಾಬ್ತು ಸಹಾ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ. ಪುಟ್ಟಗೌರಮ್ಮನವರಿಗೆ ಅವರ ಮಾವ ಮಾದಯ್ಯನವರಿಂದ ಒಟ್ಟು ಮೂರು ಎಕರೆ 20 ಗುಂಟೆ ಜಮೀನು ಬಂದಿರುವ ಬಾಬ್ತು ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ. ಅದರ ಸರ್ವೆ ನಂಬರ್ ಕುಪ್ಯಾ ಗ್ರಾಮದ 203/2 ಬಿ ಯಲ್ಲಿ 0.39 ಗುಂಟೆ ಮತ್ತು ಸರ್ವೆ ನಂಬರ್ 76 ರಲ್ಲಿ 16 ಗುಂಟೆ , ಸರ್ವೆ ನಂಬರ್ 192 ಎ ನಲ್ಲಿ 25 ಗುಂಟೆ , 190/2 ಬಿ ಯಲ್ಲಿ 23 ಗುಂಟೆ, ಸರ್ವೆ ನಂಬರ್ 214/2 ಬಿ ನಲ್ಲಿ 37 ಗುಂಟೆ, ಅಂದರೆ ಒಟ್ಟು 3 ಎಕರೆ 20 ಗುಂಟೆ ಆಕೆಗೆ ಮಾವನಿಂದ ಬಂದಿರುತ್ತದೆ.

2. ಸರ್ವೆ ನಂಬರ್ 146/2 ರಲ್ಲಿ 2 ಎಕರೆ 20 ಗುಂಟೆಯನ್ನು ಪುಟ್ಟಗೌರಮ್ಮನ ಮಾವ ಆಕೆಗೆ ಕೊಟ್ಟಿರುತ್ತಾರೆ ಎನ್ನುವುದು ಸರಿಯಲ್ಲ.

3. ನಾನು ಮೇಲ್ಕಂಡ ಎಲ್ಲಾ ಜಮೀನುಗಳ ಆರ್ ಟಿ ಸಿ ಗಳನ್ನು ಪರಿಶೀಲಿಸಿರುತ್ತೇನೆ. ಈ ಎಲ್ಲಾ ಆರ್ ಟಿ ಸಿ ಗಳನ್ನು ಪರಿಶೀಲಿಸಿದಾಗ ಕೆಲವಲ್ಲಿ ಕೃಷಿ ಉತ್ವನ್ನ ಇತ್ತು ಮತ್ತು ಕೆಲವಲ್ಲಿ ಕೃಷಿ ಉತ್ವನ್ನ ಇರಲಿಲ್ಲ. ಕೃಷಿ ಅಧಿಕಾರಿಗೆ ಮೇಲ್ಕಂಡ ಸ್ವತ್ತುಗಳ ಆರ್ ಟಿ ಸಿ ಗಳನ್ನು ಕಳುಹಿಸಿಕೊಟ್ಟಿರಲಿಲ್ಲ ,

ಸಾಕ್ಷಿ ಸ್ವತಃ ನುಡಿಯುತ್ತಾರೆ, ಅವರಲ್ಲಿ ಎಲ್ಲಾ ಆರ್ ಟಿ ಸಿ ಗಳು ಇರುತ್ತವೆ ಎಂದು. ಕೃಷಿ ಅಧಿಕಾರಿಯವರಲ್ಲಿ ಆರ್ ಟಿ ಸಿ ಗಳು ಇದ್ದವೋ ಇಲ್ಲವೋ ಎನ್ನುವ ಬಗ್ಗೆ ನಾನು ಅವರಲ್ಲಿ ವಿಚಾರಿಸಿರಲಿಲ್ಲ. ಅವರ ವರದಿಯಲ್ಲಿ ಆರ್ ಟಿ ಸಿ ಗಳನ್ನು ಪರಿಶೀಲಿಸಿ ವರದಿ ನೀಡಿರುತ್ತಾರೋ ಇಲ್ಲವೋ ಎನ್ನುವುದನ್ನು ತಿಳಿದುಕೊಂಡಿರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ಕೃಷಿ ಅಧಿಕಾರಿಯವರು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ವತ್ತುಗಳ ಬಾಬ್ತು ದಾಖಲಾತಿಗಳನ್ನು ಪರಿಶೀಲಿಸಿ, ಬೆಳೆಯ ವಿವರಗಳನ್ನು ಪಡೆದು ನಂತರವೇ ವರದಿಯನ್ನು ನೀಡುತ್ತಾರೆ ಎನ್ನುತ್ತಾರೆ. ಬೆಳೆ ವಿವರವನ್ನು ಕಂಡು ಹಿಡಿಯಲು ಯಾವ ಯಾವ ದಾಖಲೆಗಳನ್ನು ಪರಿಶೀಲಿಸಬೇಕಾಗುತ್ತದೆ ಎನ್ನುವುದು ಕೃಷಿ ಅಧಿಕಾರಿಗೆ ಗೊತ್ತಿರುತ್ತದೆ. ಕೃಷಿ ಅದಾಯವನ್ನು ಕಂಡು ಹಿಡಿಯುವಾಗ ಆರ್ ಟಿ ಸಿ ಯಲ್ಲಿ ನಮೂದಿಸಿರುವ ಬೆಳೆ, ಉತ್ಪನ್ನವೇ ಮುಖ್ಯವಾದ ದಾಖಲಾತಿಯಾಗಿರುತ್ತದೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನುಡಿಯುತ್ತಾರೆ, ಆರ್ ಟಿ ಸಿ ಯೊಂದಿಗೆ ಅವರ ಇಲಾಖೆಯಲ್ಲಿ ಕೃಷಿ ಭೂಮಿಗೆ ಸಂಬಂಧಪಟ್ಟಂತೆ ನಿರ್ವಹಿಸಿದ ದಾಖಲಾತಿಗಳನ್ನೂ ಸಹ ಪರಿಶೀಲಿಸಿ ಕೃಷಿ ಆದಾಯವನ್ನು ಕಂಡು ಹಿಡಿಯುತ್ತಾರೆ ಎನ್ನುತ್ತಾರೆ. ಆರ್ ಟಿ ಸಿ ಯನ್ನು ಹೊರತು ಪಡಿಸಿ ಬೇರೆ ಯಾವ ದಾಖಲಾತಿಗಳಿಂದ ಕೃಷಿ ಆದಾಯ ಕಂಡು ಹಿಡಿಯುತ್ತಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಕೃಷಿ ಅಧಿಕಾರಿ ಪುಟ್ಟಗೌರಮ್ಮ ರವರನ್ನು ವಿಚಾರಣೆ ಮಾಡಿದ್ದಾರೋ ಇಲ್ಲವೋ ಎಂದು ನಾನು ವಿಚಾರಿಸಿ ತಿಳಿದುಕೊಂಡಿರುವುದಿಲ್ಲ. ನಾನು ಪುಟ್ಟಗೌರಮ್ಮ ರವರನ್ನು ವಿಚಾರಿಸಿ ಅವರ ಹೇಳಿಕೆಯನ್ನು ಪಡೆದಿರುವುದಿಲ್ಲ. ಅವರ ಪತಿ ಮಲ್ಲಯ್ಯ ನವರ ಹೇಳಿಕೆಯನ್ನು ನಾನು ಪಡೆದಿರುವುದಿಲ್ಲ. ಅವರ ಸೊಸೆ ವೀಣಾ ಪ್ರಸಾದ್ ರವರ ಹೇಳಿಕೆಯನ್ನು ನಾನು ದಾಖಲಿಸಿರುವುದಿಲ್ಲ.

4. ಪುಟ್ಟಗೌರಮ್ಮನವರಿಗೆ ಅವರ ಗಂಡ ಮಲ್ಲಯ್ಯ ನವರಿಂದ ಯಾವ ಯಾವ ಸ್ವತ್ತುಗಳು ಬಂದವು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , 1 ನೇ ಪ್ಯಾರಾದಲ್ಲಿ ತಿಳಿಸಿದ ಸ್ವತ್ತುಗಳೇ ಆಕೆಗೆ ಗಂಡನಿಂದ ಬಂದಂತಹ ಸ್ವತ್ತುಗಳು ಎನ್ನುತ್ತಾರೆ.

5. ಪುಟ್ಟಗೌರಮ್ಮನವರಿಗೆ ಅವರ ಗಂಡ ಮಲ್ಲಯ್ಯನವರಿಂದ ತುಂಬಲ ಗ್ರಾಮದ ಸರ್ವೆ ನಂ. 78/1 ರಲ್ಲಿ 1 ಎಕರೆ 10 ಗುಂಟೆ, ಸರ್ವೆ ನಂ. 77 ರಲ್ಲಿ 1 ಎಕರೆ 11 ಗುಂಟೆ, ಸರ್ವೆ ನಂ. 75/2 ಎ ರಲ್ಲಿ 15 ಗುಂಟೆ, ಸರ್ವೆ ನಂ. 75/3 ರಲ್ಲಿ 9 ಗುಂಟೆ , ಸರ್ವೆ ನಂ. 76/2 ರಲ್ಲಿ 19 ಗುಂಟೆ ಬಂದಿರುತ್ತದೆ ಎನ್ನುವುದು ಸರಿಯಲ್ಲ. ಈ ಸ್ವತ್ತುಗಳ ಬಾಬ್ತು ಆರೋಪಿ ಮ್ಯಾಟೇಷನ್ ರಿಜಿಸ್ಟರ್ ಹಾಜರುಪಡಿಸಿರುತ್ತಾರೆ ಎನ್ನುವುದು ಸರಿಯಲ್ಲ. ಆರೋಪಿ ಅವುಗಳನ್ನು ಹಾಜರುಪಡಿಸಿದ್ದರೂ ಸಹ ನಾನು ಪರಿಶೀಲಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ಅಂತಿಮ ವರದಿಯಲ್ಲಿ ಅಂತಿಮ ವರದಿಯ ಪುಟ ಸಂಖ್ಯೆ 10 ರ ಪ್ಯಾರಾ 4 ರಲ್ಲಿ ಸರ್ವೆ ನಂ. 214/2 ಬಿ ಯಲ್ಲಿ 37 ಗುಂಟೆ ಮತ್ತು ಸರ್ವೆ ನಂ. 203/2 ರಲ್ಲಿ 30 ಗುಂಟೆ ಪುಟ್ಟಗೌರಮ್ಮನವರಿಗೆ ಪೌತಿ ಖಾತೆಯಾಗಿರುವ ಬಗ್ಗೆ ನಮೂದಿಸಲಾಗಿರುತ್ತದೆ ಎನ್ನುವುದು ಸರಿ. ಅವೆರಡು ಪುಟ್ಟಗೌರಮ್ಮಳ ಪಿತ್ರಾರ್ಜಿತ ಸ್ವತ್ತು ಎನ್ನುವುದು ಸರಿ. ಅಂತಿಮ ವರದಿಯ ಪುಟ ಸಂಖ್ಯೆ 80 ರ ತನಿಖಾಧಿಕಾರಿಯ ವಿಶ್ಲೇಷಣೆಯ ಪ್ಯಾರಾ 3 ರಲ್ಲಿ ಸರ್ವೆ ನಂ. 203/2 ಬಿ ಯಲ್ಲಿ 39 ಗುಂಟೆ ಜಮೀನು 2004-05 ರಲ್ಲಿ ಬಂದಿರುತ್ತದೆ ಎಂದು ಸುಳ್ಳು ನಮೂದಿಸಿರುತ್ತೀರಿ ಎಂದು ಮಾಡಿದ ಸಲಹೆಗೆ ಸಾಕ್ಷಿ, ಕೆಲಸದ ಒತ್ತಡದಿಂದ , ಕೈತಪ್ಪಿನಿಂದ , ಹೀಗಾಗಿರುತ್ತದೆ ಎನ್ನುತ್ತಾರೆ. ಇದೇ ವರದಿಯನ್ನು ಚಾ,ಸಾ. 83 ರವರಿಗೆ ಅಭಿಯೋಜನಾ ಮಂಜೂರಾತಿ ನೀಡಲು ನೀಡಿರುತ್ತೇನೆ ಎನ್ನುವುದು ಸರಿ. ಚಾ,ಸಾ. 83 ರವರಿಗೆ ಈ ಸ್ವತ್ತಿನ ಬಾಬ್ತು ಚೆಕ್ ಪೀರ್ಯಡ್ ನಲ್ಲಿ ಖರೀದಿಸಲಾಗಿದೆ ಎಂದು ತಪ್ಪಾಗಿ ಕೈ

ತಪ್ಪಿನಿಂದ ನಮೂದಿಸಲಾಗಿದೆ, ಅದನ್ನು ಸರಿ ಪಡಿಸಿಕೊಳ್ಳಬೇಕು ಎಂದು ಮನವಿ ಪತ್ರವನ್ನೇನು ಕಳುಹಿಸಿರುವುದಿಲ್ಲ.

6. ಪುಟ್ಟಗೌರಮ್ಮ ಖುದ್ದು ಖರೀದಿಸಿದ್ದ ಜಮೀನುಗಳ ಬಾಬ್ತು ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ. ಪುಟ್ಟಗೌರಮ್ಮನವರು ತುಂಬಲಾ ಗ್ರಾಮದ ಸರ್ವೆ ನಂ. 77 ರಲ್ಲಿ 31 ಗುಂಟೆ ಜಮೀನನ್ನು 02.04.1975 ರಲ್ಲಿ ಹಾಗೂ ಸರ್ವೆ ನಂ. 70/1 ರಲ್ಲಿ 15 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎನ್ನುವುದು ಸರಿ. ಈ ಸ್ವತ್ತುಗಳ ಆರ್ ಟಿ ಸಿ ಯನ್ನು ಕೃಷಿ ಅಧಿಕಾರಿಗೆ ನಾನು ನೀಡಿರುವುದಿಲ್ಲ. ಈ ಸ್ವತ್ತುಗಳ ವಿವರಗಳನ್ನು ಕೃಷಿ ಅಧಿಕಾರಿಗೆ ನೀಡಿದ್ದೆ. ಕೃಷಿ ಅಧಿಕಾರಿಗೆ ಸರ್ವೆ ನಂ. ಕೂಟ್ಟಲ್ಲಿ , ಎಲ್ಲಾ ವಿವರ ಮತ್ತು ದಾಖಲಾತಿಗಳನ್ನು ಅವರೇ ಸಂಗ್ರಹಿಸುತ್ತಾರೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಕೃಷಿ ಅಧಿಕಾರಿಗಳು ನೀಡಿದ ವರದಿಯನ್ನು ನಾನು ಖುದ್ದು ಪರಿಶೀಲಿಸಿರುತ್ತೇನೆ. ಅವರು ತಮ್ಮ ವರದಿಯನ್ನು ನೀಡುವಾಗ ಎಲ್ಲಾ ಸರ್ವೆ ನಂಬರ್ ಗಳ ಆರ್ ಟಿ ಸಿ ಯನ್ನೇನು ನೀಡಿರುವುದಿಲ್ಲ. ಕೃಷಿ ಅಧಿಕಾರಿ, ಪುಟ್ಟಗೌರಮ್ಮನವರನ್ನು ವಿಚಾರಿಸಿರುವುದಿಲ್ಲ, ಅವರ ಆರ್ ಟಿ ಸಿ ಗಳನ್ನು ಪರಿಶೀಲಿಸಿರುವುದಿಲ್ಲ, ಅಕ್ಕ ಪಕ್ಕದ ಜಮೀನುದಾರರಿಂದ ಮಾಹಿತಿಯನ್ನು ಪಡೆದು ವರದಿಯನ್ನು ನೀಡಿರುತ್ತಾರೆ ಎನ್ನುವುದು ಸರಿಯಲ್ಲ. ಆ ರೀತಿ ನೀಡಿದ ವರದಿಯನ್ನು ನಾನು ಒಪ್ಪಿಕೊಂಡಿರುತ್ತೇನೆ ಎನ್ನುವುದು ಸರಿಯಲ್ಲ.

7. ಕೃಷಿ ಅದಾಯದಲ್ಲಿ ಹೈನುಗಾರಿಕೆಯು ಸೇರುತ್ತದೆ ಎನ್ನುವುದು ಸರಿ. ಪುಟ್ಟಗೌರಮ್ಮನವರು ವ್ಯವಸಾಯದೊಂದಿಗೆ ಕುರಿ ಸಾಕಾಣಿಕೆ, ಎತ್ತುಗಳ ಸಾಕಾಣಿಕೆ, ಹಸುಕರುಗಳ ಸಾಕಾಣಿಕೆ, ಎಮ್ಮೆಗಳ ಸಾಕಾಣಿಕೆ ಯನ್ನೂ ಸಹ ಮಾಡಿ ಆದಾಯ ಗಳಿಸುತ್ತಿದ್ದರು ಎನ್ನುವುದು ಸರಿಯಲ್ಲ. ಪುಟ್ಟಗೌರಮ್ಮ ಈ ಸಾಕಾಣಿಕೆಗಳನ್ನು ಮಾಡುತ್ತಿದ್ದರು ಎಂದು ಪಶು ಪಶು ಸಂಗೋಪನಾಧಿಕಾರಿಗಳು ದೃಢೀಕರಣ ಪತ್ರವನ್ನು ನೀಡಿರುತ್ತಾರೆ ಎನ್ನುವುದು ಸರಿ. ಅದನ್ನು ನಿಪಿ

16 ಎಂದು ಗುರುತುಪಡಿಸಿಕೊಳ್ಳಲಾಗಿದೆ ಎನ್ನುವುದು ಸರಿ. ಸದರಿ ಪಶು ಸಂಗೋಪನಾಧಿಕಾರಿಗಳು ನಿಪಿ 16 ರಂತೆ ಖುದ್ದು ಸ್ಥಳಕ್ಕೆ ಭೇಟಿ ನೀಡಿ, ಎಲ್ಲವನ್ನು ಪರಿಶೀಲಿಸಿ ವರದಿ ನೀಡಿರುತ್ತಾರೆ ಎನ್ನುವುದು ಸರಿಯಲ್ಲ. ಪಶು ಸಂಗೋಪನಾಧಿಕಾರಿಗಳು ಈ ನ್ಯಾಯಾಲಯದ ಮುಂದೆ ನೀಡಿದ ಸಾಕ್ಷ್ಯವನ್ನು ನಾನು ಓದಿ ನೋಡಿರುವುದಿಲ್ಲ. ಆರೋಪಿಯನ್ನು ಈ ಪ್ರಕರಣದಲ್ಲಿ ಸಿಲುಕಿಸುವ ಸಲುವಾಗಿ ನಾನು ನಿಪಿ 17 ನ್ನು ಪಶು ಸಂಗೋಪನಾಧಿಕಾರಿಗಳಿಂದ ಕೊಡಿಸಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ 17 ನ್ನು ಖುದ್ದು ಅವರೇ ಹಾಜರುಪಡಿಸಿರುತ್ತಾರೆ. ಪಶು ಸಂಗೋಪನಾಧಿಕಾರಿ ಡಾಃ ನಾಗರಾಜು ರವರಿಗೆ ಪ್ರಮಾಣ ಪತ್ರವನ್ನು ಖುದ್ದು ನಾನೇ ಮಾಡಿಸಿಕೊಟ್ಟಿರುತ್ತೇನೆ ಎನ್ನುವುದು ಸರಿಯಲ್ಲ. ನಿಪಿ 17 ಸ್ಟ್ಯಾಂಪ್ ಪೇಪರ್ ನ್ನು ಡಾಃ ನಾಗರಾಜು ರವರು ಖರೀದಿಸಿರುವುದಿಲ್ಲ ಎನ್ನುವುದು ಸರಿ. ಡಾಃ ನಾಗರಾಜು ರವರು ನೋಟರಿ ಯವರ ಮುಂದೆ ಹಾಜರಾಗಿರಲಿಲ್ಲ ಎನ್ನುವುದು ಸರಿಯಲ್ಲ. ನೋಟರಿಯವರು ನಿಪಿ 17 ರಲ್ಲಿ ಅವರು ನಿರ್ವಹಿಸಿದ ಡೈರಿಯ ಸೀರಿಯಲ್ ನಂ. ನ್ನು ನಮೂದಿಸಿರುವುದಿಲ್ಲ ಎನ್ನುವುದು ಸರಿ. ನೋಟರಿಯವರ ರಿಜಿಸ್ಟರ್ ನಲ್ಲಿ ಡಾಃ ನಾಗರಾಜು ಸಹಿ ಮಾಡಿರುವುದೇ ಇಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ನಾನು ಸದರಿ ಡಾಃ ನಾಗರಾಜು ರವರನ್ನು ವಿಚಾರಿಸಿದಾಗ, ಅವರು 1984-85 ರಿಂದ 2007-08 ರವರೆಗೆ ಬ್ಯಾಂಕ್ ಸಾಲಕ್ಕಾಗಿ ಲೆಕ್ಕಾಚಾರ ಮಾಡಿಕೊಡಿ ಎಂದು ಕೇಳಿದ್ದರಿಂದ ಮಾಡಿಕೊಟ್ಟಿದ್ದೆ ಎಂದಿದ್ದರು. ಈ ಬಗ್ಗೆ ದಾಖಲಾತಿಗಳು ಇರುವುದಿಲ್ಲ.

8. ನಿಪಿ 16 ರಂತೆ ಪುಟ್ಟಗೌರಮ್ಮನವರ ಕೃಷಿ ಆದಾಯ ಮತ್ತು ಹೈನುಗಾರಿಕೆಯಿಂದ ಬಂದಂತಹ ಒಟ್ಟು ಆದಾಯ ರೂ.23,95,860/- ಮತ್ತು ರೂ.6,08,940/- ಎನ್ನುವುದು ಸರಿ. ಆದರೆ ಅಂತಿಮ ವರದಿಯನ್ನು ಸಲ್ಲಿಸುವಾಗ ಪುಟ್ಟಗೌರಮ್ಮನವರಿಗೆ ಹೈನುಗಾರಿಕೆಯಿಂದ ಬಂದಂತಹ ರೂ.23,95,860/- ನ್ನು

ಪರಿಗಣಿಸಿರುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ ಅವರಿಗೆ ಹೈನುಗಾರಿಕೆಯಿಂದ ಯಾವುದೇ ಆದಾಯ ಇಲ್ಲದೇ ಇದ್ದರಿಂದ ಅದನ್ನು ಪರಿಗಣಿಸಿರುವುದಿಲ್ಲ ಎನ್ನುತ್ತಾರೆ. ಈ ಹಣವನ್ನು ಬಿಟ್ಟಿರುವ ಬಾಬ್ತು ತನಿಖಾಧಿಕಾರಿಯ ವಿಶ್ಲೇಷಣೆಯಲ್ಲಿ ತಿಳಿಸಿರುವುದಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಅಂತಿಮ ವರದಿಯ ಸ್ಟೇಟ್ ಮೆಂಟ್ 4 ರಲ್ಲಿ ಸದರಿ ಆದಾಯವನ್ನು ಒಪ್ಪಲು ಬರುವುದಿಲ್ಲ ಎಂದು ತಿಳಿಸಿರುತ್ತೇನೆ ಎನ್ನುತ್ತಾರೆ ಮತ್ತು ಈ ಬಗ್ಗೆ ಕಾರಣವನ್ನು ನೀಡಲಾಗಿದೆ. ಪುಟ್ಟಗೌರಮ್ಮನವರು ರೂ.10,00,000/- ಖರ್ಚು ಮಾಡಿ ಜಮೀನನ್ನು ಕೊಂಡಿದ್ದು , ಆಕೆಗೆ ಅದನ್ನು ಕೊಳ್ಳುವಷ್ಟು ಆದಾಯ ಇರಲಿಲ್ಲ ಎಂದು ನನ್ನ ವಿಶ್ಲೇಷಣೆಯಲ್ಲಿ ತಿಳಿಸಿರುತ್ತೇನೆ ಎನ್ನುವುದು ಸರಿ. ಆಕೆಯ ಹೈನುಗಾರಿಕೆಯಿಂದ ಬಂದ ಆದಾಯವನ್ನು ನಾನು ಗಣನೆಗೆ ತೆಗೆದುಕೊಂಡಿರುವುದಿಲ್ಲವಾದ್ದರಿಂದ ಎನ್ನುವುದು ಸರಿ.

9. ತಹಸೀಲ್ದಾರ್ ರಿಂದ ಪುಟ್ಟಗೌರಮ್ಮನವರ ಕೃಷಿ ಆದಾಯದ ಬಾಬ್ತು ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ. ಅವರಿಂದ ದಾಖಲಾತಿಗಳನ್ನು ಕೇಳಿದ್ದೆ. ಆದರೆ ಅವರು ಸಂಬಂಧಪಟ್ಟ ಇಲಾಖೆಯಿಂದ ಪಡೆದುಕೂಳ್ಳಿ ಎಂದು ತಿಳಿಸಿದ್ದರು. ಆದ್ದರಿಂದ ಕೃಷಿ ಅಧಿಕಾರಿಯಿಂದ ವರದಿಯನ್ನು ಪಡೆದುಕೊಂಡೆ. ಕೃಷಿ ಅಧಿಕಾರಿಯವರು, ಆರ್ ಟಿ ಸಿ ಯ ಪ್ರಕಾರ ವರದಿ ಬೇಕಿದ್ದಲ್ಲಿ , ತಹಸೀಲ್ದಾರ್ ರಲ್ಲಿ ಕೇಳಿ ಎಂದು ಹೇಳಿರುತ್ತಾರೆ ಎನ್ನುವ ಬಾಬ್ತು ನನಗೆ ಗೊತ್ತಿಲ್ಲ. ಟಿ.ನರಸೀಪುರ ತಾಲ್ಲೂಕು ತಹಸೀಲ್ದಾರ್ ಮತ್ತು ಮೈಸೂರು ತಾಲ್ಲೂಕು ತಹಸೀಲ್ದಾರ್ ರವರಿಂದ ಆರ್ ಟಿ ಸಿ ಪರಿಶೀಲಿಸಿ ಪುಟ್ಟಗೌರವ್ಮನ ಕೃಷಿ ಆದಾಯದ ಬಗ್ಗೆ ವರದಿ ಬರಲು ಬಾಕಿ ಇತ್ತು ಎನ್ನುವುದು ಸರಿಯಲ್ಲ. ಆ ವರದಿಗಳು ಬರುವ ಮುಂಚಿತವಾಗಿಯೇ ನಾನು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎನ್ನುವುದು ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.